ದಿನಾಂಕಃ 14-01-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ  ಸರಕಾರಿ ಅಭಿಯೋಜಕರಿಂದ:</u>**

ಸದ್ರಿ ವಾಹನವನ್ನು ನೋಡಿದಲ್ಲಿ ಗುರುತಿಸುತ್ತೇನೆ. ವಾಹನವನ್ನು ನೋಡಿ ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ  2 ನೇ ಆರೋಪಿ ಪರ ಶ್ರೀ ಎ.ಆರ್.ಆರ್. ವಕೀಲರಿಂದಃ</u>**

ಆ ದಿನ ನಾನು ಡಯಾನ ಟಾಕೀಸ್ ಸ್ಟ್ಯಾಂಡ್ ನಲ್ಲಿ ಇದ್ದೆ. ಆ ದಿನ ನಾನು ಮಣಿಪಾಲ ವಸತಿಗೃಹದ ಕಡೆಗೆ ಹೋಗುತ್ತಿದ್ದೆ ಎಂದು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ. ನಾನು ಸಂಶಯಾತೀತ ಕಾರನ್ನು ಮತ್ತು ಜನರನ್ನು ನೋಡಿದ ಬಗ್ಗೆ ಪೋಲಿಸರಿಗೆ ಮಾಹಿತಿಕೊಟ್ಟಿಲ್ಲ. ಸದ್ರಿ ಕಾರು ನಂತರ ಯಾವ ಕಡೆಗೆ ಮತ್ತು ಎಲ್ಲಿಗೆ ಹೋಯಿತು ಎಂದು ಗೊತ್ತಿಲ್ಲ. ಪೋಲಿಸರಿಗೆ ನಾನು ಕಾರಿನ ಸಂಖ್ಯೆಯನ್ನು ಹೇಳಿಲ್ಲ. ಪೋಲಿಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**<u>ಮರು ವಿಚಾರಣೆಃ</u>  -ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು  ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.